ವಿತ್ತ ಸಂಚಿಕೆ
JUNE 2024

# INSPIRE INDIA




ಶರಣ್ ಪಾಟೀಲ್
ಆರ್ಥಿಕ ತಜ್ಞರು

## ಸಲಹೆ ನಮ್ಮದು ಹೂಡಿಕೆ ನಿಮ್ಮದು

INSPIRE INDIA WEALTH PRIVATE LTD. @ 65, 'Surasa Enclave' 1st floor, Puttanna Road, Gandhi Bazar Basvanagudi, Bengaluru 560004, Ph: +91 8042129917, 9035414414. Mail: info@inspireindiafs.com Website: www.inspireindiafs.com



ನಿಂತು ಮಾತನಾಡಲು ಹೇಗೆ ಧೈರ್ಯ ಬೇಕಾಗುತ್ತದೋ ಹಾಗೇ ಕುಳಿತು ಆಲಿಸಲೂ ಧೈರ್ಯ ಬೇಕಾಗುತ್ತದೆ.
–ವಿನ್ಸಂಟ್ ಚರ್ಚಿಲ್



ಬದಲಾವಣೆ ಮಾಡುವ ಶಕ್ತಿ ನಿಮಗೆ ಇಲ್ಲದೇ ಹೋದರೆ ಟೀಕಿಸುವ ಶಕ್ತಿ ಕೂಡ ಇರುವುದಿಲ್ಲ.
–ಮಾರ್ಕ್ ಟ್ವೆಯ್ನ್



ಸೋಲು ಎನ್ನುವುದು ಯಾವುದೇ ಕೆಲಸವನ್ನು ಇನ್ನಷ್ಟು ಜಾಣ್ಮೆಯಿಂದ ಮಾಡಲು ಸಿಗುವ ಸದಾವಕಾಶ.
–ಹೆನ್ರಿ ಫೋರ್ಡ್

# ಹೂಡಿಕೆಗೆ ಚಾಣಕ್ಯ ಸೂತ್ರಗಳು!



ನೀವು ಹೂಡಿಕೆದಾರರು ಹೌದೋ ಅಲ್ಲವೋ, ಆದರೆ ನಿಮಗೆ ಚಾಣಕ್ಯ ಮತ್ತು ಆತನ ನೀತಿಗಳ ಪರಿಚಯ ಇದ್ದೇ ಇರುತ್ತದೆ.

ಚಾಣಕ್ಯ ಕೇವಲ ವಿದ್ವಾಂಸ, ಅರ್ಥಶಾಸ್ತ್ರಜ್ಞ ಮತ್ತು ರಾಜಕೀಯ ತಂತ್ರಗಾರ ಮಾತ್ರವಲ್ಲದೆ ಹಣ–ಕಾಸು ನಿರ್ವಹಣೆಯಲ್ಲಿಯೂ ನಿಷ್ಣಾತ ಎಂಬುದು ಬಹಳಷ್ಟು ಜನರಿಗೆ ಗೊತ್ತಿಲ್ಲ. "ಅರ್ಥಶಾಸ್ತ್ರ" ಗ್ರಂಥದಲ್ಲಿನ ಆತನ ಬೋಧನೆಗಳು ಆಧುನಿಕ ಜಗತ್ತಿನ ಹೂಡಿಕೆದಾರರಿಗೂ ಜೀವನದಲ್ಲಿ ಹಣ–ಕಾಸು ಯಶಸ್ಸು ಗಳಿಸುವುದು ಹೇಗೆ ಎನ್ನುವ ಬಗ್ಗೆಯೂ ಒಳನೋಟಗಳನ್ನು ನೀಡುತ್ತವೆ. ರಾಜ–ಕೀಯ ತಂತ್ರಗಾರಿಕೆಯಿಂದ ಆರಂಭಿಸಿ ಆಡಳಿತದ ಕೌಶಲ್ಯಗಳ ತನಕ ಚಾಣಕ್ಯ ಎಲ್ಲ ರಂಗಗಳಲ್ಲಿ ತನ್ನ ಶ್ರೇಷ್ಠತೆಯನ್ನು ಮೆರೆದಿದ್ದಾನೆ. ಚಾಣಕ್ಯನ ಚಿಂತನೆಗಳು ಮತ್ತು ಸಿದ್ಧಾಂತಗಳು ಎಷ್ಟು ಪ್ರಭಾವಿ ಎಂದರೆ ಅವುಗಳನ್ನು ಇಂದಿಗೂ ಆಡಳಿತದ ಮೂಲತತ್ವಗಳೆಂದು ಪರಿಗಣಿಸಲಾಗುತ್ತದೆ.

ನಾವು ಈ ಲೇಖನದಲ್ಲಿ ಚಾಣಕ್ಯನ ಚತುರತೆಯನ್ನು ಅಳವಡಿಸಿಕೊಂಡು ಆತನ ಬೋಧನೆಯಲ್ಲಿ ಇರುವ ಮೌಲ್ಯಯುತವಾದ ಅಂಶಗಳನ್ನು ಹೂಡಿಕೆಯ ಪಾಠವಾಗಿ ಆಯ್ಕೆ ಮಾಡಿಕೊಳ್ಳುವ ಪ್ರಯತ್ನ ಮಾಡೋಣ. ಆತನಿದ್ದ ಯುಗವೊಂದು ಗತಿಸಿ ಹೋಗಿರಬಹುದು, ಆದರೆ ಆ ಕಾರ್ಯತಂತ್ರಗಳು, ದೃಷ್ಟಿಕೋನ ಮತ್ತು ಕೌಶಲ್ಯದ ತಿರುಳು ಶತಮಾನಗಳ ಹಿಂದೆ ಇದ್ದಂತೆ ಇಂದಿಗೂ ಪ್ರಸ್ತುತವಾಗಿವೆ.

### 1.ಹೂಡಿಕೆಗೂ ಮೊದಲು ಇರಲಿ ಯೋಜನೆ:

**"ಯಾವುದೇ ಕೆಲಸ ಮಾಡುವುದಕ್ಕೂ ಮುನ್ನ ನಿಮಗೆ ನೀವೇ3 ಪ್ರಶ್ನೆಗಳನ್ನು ಕೇಳಿಕೊಳ್ಳಿ: ನಾನು ಯಾಕಿದನ್ನು ಮಾಡುತ್ತಿದ್ದೇನೆ? ಇದರ ಫಲಿತಾಂಶ ಏನಿರಬಹುದು? ಮತ್ತು ಇದರಲ್ಲಿ ನಾನು ಯಶಸ್ವಿಯಾಗಬಹುದೇ? ಈ ಬಗ್ಗೆ ಗಹನವಾಗಿ ಯೋಚಿಸಿ ಇಷ್ಟೂ ಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರ ನಿಮಗೆ ಸಿಕ್ಕರೆ ಆಗ ಮಾತ್ರ ಮುನ್ನಡೆಯಿರಿ"**

ಈ ಸೂತ್ರ ಹೂಡಿಕೆಯ ವಿಚಾರದಲ್ಲಿಯೂ ನಿಜ. ಯಾವುದೇ ಒಂದು ಸಾಹಸ ಮಾಡುವುದಕ್ಕೂ ಮುನ್ನ ಸಮಗ್ರ ಯೋಜನೆ ರೂಪಿಸುವುದು




ಭಾರತದ ಮ್ಯುಚ್ಯುಯಲ್ ಫಂಡ್: ಒಂದು ಸಿಂಹಾವಲೋಕನ 3



ತುರ್ತು ವರ್ಷಾಶನ: ಬಿಟ್ಟುಬಿಡಿ ನಿವೃತ್ತಿ ಜೀವನದ ಚಿಂತೆ 5



ಉತ್ತಮವಾದ ಸಲಹೆ.ಸ್ಪಷ್ಟವಾದ ಯೋಜನೆ ಹೂಡಿಕೆಯ ಮಾನದಂಡ. ಎಲ್ಲಿ ಹೂಡಿಕೆ ಮಾಡಬೇಕು, ಎಷ್ಟು ಹೂಡಿಕೆ ಮಾಡಬೇಕು ಮತ್ತು ಎಷ್ಟು ಅವಧಿಯ ವರೆಗೆ ಇದನ್ನು ಮಾಡಲು ಸಾಧ್ಯ ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳುವುದು ಮುಖ್ಯ.

ಆದರೆ ನಿರ್ದಿಷ್ಟವಾದ ಅಗತ್ಯಗಳೊಂದಿಗೆ ತಳಕು ಹಾಕಿಕೊಂಡಾಗ ಇಡೀ ಹೂಡಿಕೆ ಪ್ರಕ್ರಿಯೆ ಇನ್ನಷ್ಟು ಸರಳಗೊಳ್ಳುತ್ತದೆ. ನಿಮ್ಮ ಉದ್ದೇಶಗಳನ್ನು ಅರ್ಥ ಮಾಡಿಕೊಂಡಾಗ ಅದರ ನಿಜವಾದ ದಿಕ್ಕು ಮತ್ತು ಅವಧಿಯ ಬಗ್ಗೆ ಸ್ಪಷ್ಟತೆ ಮೂಡುತ್ತದೆ. ಹಾಗೆ ಮಾಡುವುದರಿಂದ ಅಗತ್ಯವಿರುವ ಹೂಡಿಕೆ ಮೊತ್ತದ ಬಗ್ಗೆ ನಿರ್ಧಾರ ಕೈಗೊಳ್ಳಲು ಮತ್ತು ಸೂಕ್ತ ಹೂಡಿಕೆಯ ಮೂಲಕ ನಿಮ್ಮ ಗುರಿಯನ್ನು ತಲುಪಬಹುದು. ಒಂದು ವೇಳೆ ತಾನು ಎಲ್ಲಿಗೆ ಹೋಗುತ್ತಿದ್ದೇನೆ ಎನ್ನುವ ಬಗ್ಗೆ ಸ್ಪಷ್ಟತೆ ಇಲ್ಲದೇ ಇದ್ದರೆ ಎಷ್ಟು ಜೋರಾಗಿ ಓಡಿದರೂ ಅಷ್ಟೇ, ಗುರಿ ತಲುಪಲು ಸಾಧ್ಯವಿಲ್ಲ.

ನಿಮ್ಮ ಹೂಡಿಕೆಯನ್ನು ಅಗತ್ಯಗಳೊಂದಿಗೆ ತಳಕು ಹಾಕಿಕೊಂಡಾಗ ಅದರ ಕಾರ್ಯತಂತ್ರಕ್ಕೆ ಬದ್ಧವಾಗಿರಲು ಉತ್ತೇಜನ ದೊರೆಯುತ್ತದೆ. ಅದು ದುಡುಕದೇ ಇರುವಂತೆ ನಿಮ್ಮನ್ನು ತಡೆಯುತ್ತದೆ. ಯಾಕೆಂದರೆ ಹಣಕಾಸು ಸಾಹಸದಲ್ಲಿ ದುಡುಕಿಗಿಂತ ದೊಡ್ಡ ಶತ್ರು ಇನ್ನೊಂದಿಲ್ಲ.

**2.ಬೆಂಬಲಕ್ಕಿರಲಿ ತುರ್ತುನಿಧಿ: "ಭವಿಷ್ಯದ ವಿಪತ್ತುಗಳಿಂದ ನಿಮ್ಮ ಸಂಪತ್ತನ್ನು ರಕ್ಷಿಸಿಕೊಳ್ಳಿ... ಸಿರಿವಂತನ ಸಿರಿ ಒಮ್ಮೆ ಅಲುಗಾಡಲು ಶುರುವಾದರೆ ಸಾಕು, ಕೂಡಿಟ್ಟ ಸಂಪತ್ತು ಕೂಡ ಕರಗುವುದು ಖಚಿತ"**

ಚಾಣಕ್ಯನ ಈ ಸಲಹೆ, ತುರ್ತುನಿಧಿಯನ್ನು ಸ್ಥಾಪಿಸಿಕೊಳ್ಳುವುದು ಎಷ್ಟು ಅತ್ಯಗತ್ಯ ಎಂಬುದನ್ನು ಒತ್ತಿ ಹೇಳುತ್ತದೆ. ಹಣಕಾಸು ಭದ್ರತೆ ಮತ್ತು ಸ್ಥಿರತೆಯನ್ನು ಕಾಯ್ದುಕೊಳ್ಳಲು ಬಹುಮುಖ್ಯ. ಇದರಿಂದ ಅನೇಕ ಹಣಕಾಸು ಸವಾಲುಗಳನ್ನು ಸುಲಭವಾಗಿ ಎದುರಿಸಲು ಸಾಧ್ಯವಾಗುತ್ತದೆ. ಮಾರುಕಟ್ಟೆ ವ್ಯತಿರಿಕ್ತವಾಗಿ ವರ್ತಿಸಿದಾಗ, ವೈದ್ಯಕೀಯ ಖರ್ಚುಗಳು, ಮನೆ ಅಥವಾ ವಾಹನ ರಿಪೇರಿ, ಉದ್ಯೋಗ ನಷ್ಟ ಸೇರಿದಂತೆ ಅನೇಕ ಸವಾಲುಗಳು ಇದರಲ್ಲಿ ಸೇರಿವೆ. ಇಂತಹ ಸಂದರ್ಭದಲ್ಲಿ ತುರ್ತುನಿಧಿ ಕಾಯ್ದುಕೊಂಡರೆ ಕನಿಷ್ಠ ಆರು ತಿಂಗಳ ಖರ್ಚಿನ ಮಟ್ಟಿಗಾದರೂ ಅದು ನಿಮ್ಮನ್ನು ರಕ್ಷಣೆ ಮಾಡಲು ನೆರವಿಗೆ ಬರುತ್ತದೆ.ತೀರಾ ಪ್ರತಿಕೂಲ ಪರಿಸ್ಥಿತಿಗಳಲ್ಲಿ ನಿಮ್ಮ ಸುದೀರ್ಘ ಕಾಲದ ಹೂಡಿಕೆಗಳ ತಂಟೆಗೆ ಹೋಗದೆ ನಿಮ್ಮ ದಿನದ ಅಗತ್ಯಗಳನ್ನು ಪೂರೈಸಿಕೊಳ್ಳಲು ತುರ್ತುನಿಧಿ ನೆರವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ನೀವು ಸಾಲ ಅಥವಾ ಕ್ರೆಡಿಟ್ ಕಾರ್ಡ್‌ಗಳ ಮೊರೆ ಹೋಗುವುದನ್ನು ತಪ್ಪಿಸಬಹುದು.

**3.ತಿದ್ದಿಕೊಳ್ಳುತ್ತಿರಿ, ಬದ್ಧತೆ ಇರಲಿ: "ಹಿಡಿದ ಕೆಲಸವನ್ನು ಎಂದಿಗೂ ಕೈಬಿಡಬಾರದು, ಸೋಲಿಗೆ ಎದೆಗುಂದದೆ ಮುನ್ನಡೆಯಬೇಕು. ಯಾರು ನಿಷ್ಠೆಯಿಂದ ಕೆಲಸ ಮಾಡುತ್ತಾರೋ ಅವರೇ ನಿಜವಾದ ಸುಖಿ"**



ಕಳೆದ ಕೆಲ ದಶಕಗಳ ಅವಧಿಯಲ್ಲಿ ಷೇರು ಮಾರುಕಟ್ಟೆಯಲ್ಲಿ ಅನೇಕ ಕುಸಿತಗಳು ಉಂಟಾಗಿವೆ. ಅದಕ್ಕೆ ಸಾಂಕ್ರಾಮಿಕ ರೋಗಗಳು, ಹಗರಣಗಳು ಮತ್ತು ಆರ್ಥಿಕ ಹಿಂಜರಿತಗಳು ಸೇರಿದಂತೆ ಅನೇಕ ಅಂಶಗಳು ಕಾರಣ.ಈ ಕುಸಿತದ ತೀವ್ರತೆ ಅಥವಾ ಅದಕ್ಕೆ ಕಾರಣಗಳು ಏನೇ ಇದ್ದರೂ ಕೂಡ ಷೇರು ಮಾರುಕಟ್ಟೆ ಮುಂದಿನ ವರ್ಷಗಳಲ್ಲಿ ಅಷ್ಟೇ ಬಲವಾಗಿ ಚೇತರಿಸಿಕೊಂಡಿದೆ ಎಂಬುದೂ ಸತ್ಯ.

ಮಾರುಕಟ್ಟೆಯಲ್ಲಿ ಕುಸಿತ ಉಂಟಾದಾಗ ಅನೇಕ ಮಂದಿ ಹೂಡಿಕೆದಾರರು ಭಯದಿಂದ ನಷ್ಟದಲ್ಲಿಯೇ ತಮ್ಮ ಷೇರುಗಳನ್ನು ಮಾರಾಟ ಮಾಡಿದ್ದಾರೆ.ಇಂತಹ ನಷ್ಟಕ್ಕೆ ಮುಖ್ಯವಾಗಿ ನಮ್ಮ ನಡವಳಿಕೆಗಳೇ ಕಾರಣ. ಆದರೆ ಯಾರು ತಾಳ್ಮೆಯಿಂದ ಹೂಡಿಕೆಯನ್ನು ಚಾಲ್ತಿಯಲ್ಲಿಟ್ಟರೋ ಅವರು ಸುದೀರ್ಘಾವಧಿಯಲ್ಲಿ ಗೆಲುವನ್ನು ಕಂಡಿದ್ದಾರೆ.

**4.ನೀರಿನ ಆಳ ನೋಡಲು ಹೋಗಿ ಬಾವಿಗೆ ಬೀಳದಿರಿ: "ಉಳಿದವರ ತಪ್ಪುಗಳನ್ನು ನೋಡಿ ಕಲಿಯಿರಿ...ಸರ್ವಸ್ವವನ್ನೂ ನಿಮ್ಮದಾಗಿ ಮಾಡಿಕೊಳ್ಳುವಷ್ಟು ಸುದೀರ್ಘ ವರ್ಷ ನೀವು ಬದುಕುವುದೂ ಇಲ್ಲ"**

ನೋಡಿ ಕಲಿಯುವುದಕ್ಕಿಂತ ದೊಡ್ಡ ಶಿಕ್ಷಕನಿಲ್ಲ. ಎಲ್ಲ ಪಾಠಗಳು ವೈಯಕ್ತಿಕ ಅನುಭವಗಳಿಂದಲೇ ಆಗಬೇಕು ಅಂತೇನೂ ಇಲ್ಲ. ತೀಕ್ಷ್ಣಮತಿಯ ಹೂಡಿಕೆದಾರನ ನಿರಂತರ ಒಳನೋಟ, ಉಳಿದವರ ತಪ್ಪು ಹೆಜ್ಜೆಗಳನ್ನು ಕೂಡ ಗಮನಿಸಬಹುದು ಮತ್ತು ಅಂತಹ ತಪ್ಪುಗಳನ್ನು ತಾವು ಮಾಡದಂತೆ ಎಚ್ಚರಿಕೆ ವಹಿಸಬಹುದು.ಉದಾಹರಣೆಗೆ ನಿಮ್ಮ ಸಹವರ್ತಿಗಳಲ್ಲಿ ಕೆಲವರು ಒಂದಷ್ಟು ಷೇರುಗಳಲ್ಲಿ ನಷ್ಟ ಮಾಡಿಕೊಂಡಿದ್ದರೆ ಅಂತಹ ಅಪಾಯಗಳಿಗೆ ನಿಮ್ಮನ್ನು ನೀವು ಯಾಕೆ ಒಡ್ಡಿಕೊಳ್ಳಬೇಕು?ನಿರ್ವಹಣೆ ಮತ್ತು ಹೂಡಿಕೆ ಎರಡರಿಂದಲೂ ಕಲಿಯುವ ಪಾಠ ದೊಡ್ಡದು.ಅವುಗಳನ್ನು ತೆರೆದ ಮನಸ್ಸಿನಿಂದ ಕಲಿಯುತ್ತ ಹೋಗಬೇಕು.

**5.ಅತಿಯಾಸೆಯಿಂದ ದೂರವಿರಿ: "ಯಾವುದೇ ಆಗಲಿ ಅತಿಯಾದರೆ ವಿಷ. ಅಂತಹ ಅತಿಯಾಸೆಯಿಂದ ದೂರವಿರಬೇಕು."**

ಯಾವುದನ್ನೂ ಅತಿಯಾಗಿ ಮಾಡಬಾರದು ಎಂಬ ಸಿದ್ಧಾಂತವು ಹೂಡಿಕೆ ವಿಚಾರದಲ್ಲಿಯೂ ಅನ್ವಯವಾಗುತ್ತದೆ. ಯಾಕೆಂದರೆ ಯಾವುದೇ ಒಂದು ಆಸ್ತಿ ವರ್ಗದ ಮೇಲೆ ಅತಿಯಾಗಿ ಅವಲಂಬಿಸಿಕೊಂಡರೆ ಒಂದಲ್ಲ ಒಂದು ದಿನ ಅದರಿಂದ ಹಿನ್ನಡೆಯಾಗುವುದು ನಿಶ್ಚಿತ. ಹಾಗಾಗಿ ಹೂಡಿಕೆಯಲ್ಲಿ ಯಾವತ್ತೂ ಪಾಲಿಸಬೇಕಾದ ನಿಯಮವೆಂದರೆ ವೈವಿಧ್ಯತೆಯನ್ನು ಕಾಯ್ದುಕೊಳ್ಳುವುದು. ಷೇರು, ಬಾಂಡ್‌ಗಳು ಮತ್ತು ಚಿನ್ನದಂತಹ ನಾನಾ ಆಸ್ತಿ ವರ್ಗಗಳನ್ನು ಹೂಡಿಕೆಗೆ ಆಯ್ಕೆ ಮಾಡಿಕೊಳ್ಳುವುದರಿಂದ ನಿಮ್ಮ ಒಟ್ಟಾರೆ ಹೂಡಿಕೆ ಜರ್ನಿ ಸ್ಥಿರವಾಗಿರುತ್ತದೆ.ಎಲ್ಲ ಹೂಡಿಕೆಗಳು ಚೆನ್ನಾಗಿ ನಿರ್ವಹಣೆ ತೋರದೇ ಇದ್ದರೂ ಸಮಸ್ಯೆ ಉಂಟಾಗುವುದಿಲ್ಲ.

**6.ಅರ್ಹರಿಗೆ ಮಾತ್ರ ನಿಮ್ಮ ಸಂಪತ್ತನ್ನು ಒಪ್ಪಿಸಿ: "ನಿಮ್ಮ ಸಂಪತ್ತನ್ನು ಯಾರು ಅರ್ಹರೋ ಅವರಿಗೆ ಮಾತ್ರ ನೀಡಿ, ಉಳಿದವರಿಗಲ್ಲ. ಮೋಡದಿಂದ ಸುರಿದ ಸಮುದ್ರದ ನೀರು ಯಾವತ್ತೂ ಸಿಹಿಯಾಗಿರುತ್ತದೆ."**

ನಿಮ್ಮ ಹೂಡಿಕೆಗಳಲ್ಲಿ ಪ್ರಗತಿ ಅಥವಾ ಕುಸಿತಕ್ಕೆ ಸಂಪೂರ್ಣವಾಗಿ ನೀವೇ ಹೊಣೆ.ಯಾಕೆಂದರೆ ನೀವು ನಿಮ್ಮ ಹಣವನ್ನು ಎಷ್ಟು ಪರಿಣಾಮಕಾರಿಯಾಗಿ ನಿಭಾಯಿಸಿದ್ದೀರಿ ಎಂಬುದರಿಂದ ಇವೆಲ್ಲ ನಿರ್ಧಾರವಾಗುತ್ತದೆ. ಮ್ಯುಚ್ಯುಯಲ್ ಫಂಡ್‌ಗಳು ಅಥವಾ ಎನ್‌ಪಿಎಸ್‌ನಂತಹ ಪರಿಪೂರ್ಣ ನಿಯಂತ್ರಿತ ಉತ್ಪನ್ನಗಳನ್ನು ಅರ್ಹ ವೃತ್ತಿಪರರು ನಿಭಾಯಿಸುವ ಕಾರಣ ನಿಮ್ಮ ಸಂಪತ್ತು ಎಂದಿಗೂ ಕೈಕೊಡದಂತೆ ಎಚ್ಚರಿಕೆ ವಹಿಸುತ್ತಾರೆ.ಆದರೆ ಎಲ್ಲವನ್ನೂ ನೀವೇ ಮಾಡುವ ಸಾಹಸಕ್ಕೆ ಇಳಿದಾಗ ಅನೇಕ ತಪ್ಪುಗಳಿಗೆ ದಾರಿ ಮಾಡಿಕೊಟ್ಟಂತಾಗುತ್ತದೆ.

**ಬಾಟಮ್‌ಲೈನ್:** ಚಾಣಕ್ಯನ ಮೌಲ್ಯಯುತವಾದ ಪಾಠಗಳನ್ನು ನಾವು ಅಳವಡಿಸಿಕೊಂಡರೆ ನಮ್ಮ ಹೂಡಿಕೆಯ ಪಯಣಕ್ಕೆ ಉತ್ತಮ ಅಡಿಪಾಯ ಹಾಕಿಕೊಟ್ಟಂತಾಗುತ್ತದೆ. ಆತನ ಬೋಧನೆಗಳು ಮಾರುಕಟ್ಟೆಯಲ್ಲಿನ ಅನಿಶ್ಚಿತತೆಯನ್ನು ದಾಟಿ ಬರುವಲ್ಲಿ ಉತ್ತಮ ದಾರಿದೀಪಗಳಾಗಿವೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಜೊತೆಗೆ ನಮ್ಮಲ್ಲೊಂದು ಆತ್ಮವಿಶ್ವಾಸದ ಟಾನಿಕ್ ಆಗಿ ಅವು ಕೆಲಸ ಮಾಡುತ್ತವೆ. ಅಷ್ಟಕ್ಕೂ ಇದು ಭಾರತದ ಸಾಂಪ್ರದಾಯಿಕ ಬುದ್ಧಿವಂತಿಕೆಯನ್ನು ಆಧುನಿಕ ಹಣಕಾಸು ತಂತ್ರಗಳ ಜೊತೆ ಮಿಶ್ರಣ ಮಾಡುವ ಅವಕಾಶ. ಇಂತಹ ಆಯ್ಕೆಗಳ ಮೂಲಕ ಸುಸ್ಥಿರವಾದ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತದೆ.




# ಭಾರತದ ಮುಚ್ಯುಯಲ್ ಫಂಡ್: ಒಂದು ಸಿಂಹಾವಲೋಕನ

**ದೇಶ**ದಾದ್ಯಂತ ಇರುವ ಲಕ್ಷಾಂತರ ಸಣ್ಣ ಹಾಗೂ ದೊಡ್ಡ ಹೂಡಿಕೆದಾರರು ತೊಡಗಿಸಿಕೊಂಡಿರುವ ಈ ಮುಚ್ಯುಯಲ್ ಫಂಡ್, ಬಂಡವಾಳ ಮಾರುಕಟ್ಟೆಯಿಂದ ಪ್ರಯೋಜನ ಮಾಡಿಕೊಳ್ಳುವ ಒಂದು ಮಾರ್ಗ. ಇದು ಭಾರತದಲ್ಲಿ ಆರಂಭವಾಗಿದ್ದು 1963ರಲ್ಲಿ. ಅಲ್ಲಿಂದೀಚೆಗೆ ಮುಚ್ಯುಯಲ್ ಫಂಡ್ ಉದ್ಯಮ ಬೆಳೆದಿರುವ ರೀತಿ ಅಗಾಧವಾದುದು. ಇದರೊಂದಿಗೆ ನಮ್ಮ ರಾಷ್ಟ್ರದ ಒಟ್ಟು ಹಣಕಾಸು ಸ್ವರೂಪವೇ ತಳಕು ಹಾಕಿಕೊಂಡಿದೆ ಎಂದರೆ ಅಚ್ಚರಿಯಿಲ್ಲ. ಚಿಲ್ಲರೆ ಹಾಗೂ ಸಾಂಸ್ಥಿಕ ಹೂಡಿಕೆದಾರರು ಅನೇಕ ಹಣಕಾಸು ಅಗತ್ಯಗಳಿಗಾಗಿ ಬಳಸುವ ಮುಚ್ಯುಯಲ್ ಫಂಡ್ ಅತ್ಯಂತ ಜನಪ್ರಿಯ ಹಣಕಾಸು ಸಾಧನ. ಈ ಉದ್ಯಮವು ಕಳೆದ ಕೆಲವು ವರ್ಷಗಳಲ್ಲಂತೂ ಎಲ್ಲ ಆಯಾಮಗಳಲ್ಲಿಯೂ ಅಗಾಧವಾಗಿ ಬೆಳೆದಿದೆ. ಇದರಲ್ಲಿ ಮ್ಯಾನೇಜ್‌ಮೆಂಟ್ ಅಧೀನದಲ್ಲಿರುವ ಆಸ್ತಿಗಳು (AUM), ಯೋಜನೆಗಳ ಸಂಖ್ಯೆ, ಫಂಡ್ ಹೌಸ್ ಇತ್ಯಾದಿಗಳು ಸೇರಿವೆ.

ಭಾರತದ ಮುಚ್ಯುಯಲ್ ಫಂಡ್ ಉದ್ಯಮ ಜಗತ್ತಿನಲ್ಲಿಯೇ ಅತ್ಯಂತ ತ್ವರಿತ ಗತಿಯಲ್ಲಿ ಬೆಳೆಯುತ್ತಿರುವ ಉದ್ಯಮ ಎಂಬುದು ಸಾಬೀತಾಗಿದೆ.ಕಳೆದ ಆರು ದಶಕಗಳ ಅವಧಿಯಲ್ಲಿ ಈ ಉದ್ಯಮದ AUM ಆರು ಪಟ್ಟು ಹೆಚ್ಚಾಗಿದೆ. 2014ರ ಅವಧಿಯಲ್ಲಿ ಇದು 8.25 ಲಕ್ಷ ಕೋಟಿಯಷ್ಟಿತ್ತು. ಅದೀಗ 2024ರ ಮಾರ್ಚ್ ತಿಂಗಳ ಹೊತ್ತಿಗೆ 53.4 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ. ಭಾರತದಲ್ಲಿ ಸುಮಾರು 45 ಮುಚ್ಯುಯಲ್ ಫಂಡ್ ಉದ್ಯಮಗಳಿವೆ. ಆದರೆ ACE ಒಈ ನೀಡಿರುವ ದತ್ತಾಂಶದ ಪ್ರಕಾರ ಒಟ್ಟು ಮುಚ್ಯುಯಲ್ ಫಂಡ್ ಆಸ್ತಿಗಳ AMC ಶೇ.78ರಷ್ಟು ಎಂದು ಅಂದಾಜು ಮಾಡಲಾಗುತ್ತದೆ.

2023–24ರ ಹಣಕಾಸು ಅವಧಿಯಲ್ಲಂತೂ ಭಾರತದ ಮುಚ್ಯುಯಲ್ ಫಂಡ್ ಉದ್ಯಮ ಅಭೂತಪೂರ್ವ ಸಾಧನೆಯನ್ನು ಮಾಡಿದೆ.ಇದರ ಪ್ರಗತಿ ಅಸಾಧಾರಣವಾದುದು. ಹೂಡಿಕೆದಾರರು ಮುಚ್ಯುಯಲ್ ಫಂಡ್‌ನ್ನು ತಮ್ಮ ಆದ್ಯತೆಯಾಗಿ ಮಾಡಿಕೊಳ್ಳುವುದು ಹೆಚ್ಚಿದೆ. ಇಲ್ಲಿ ಪ್ರಸ್ತಾಪ ಮಾಡಿರುವ ಕೆಲವು ಮೈಲಿಗಲ್ಲುಗಳು 2024ರ ಹಣಕಾಸು ವರ್ಷದಲ್ಲಿ ಭಾರತದ ಮುಚ್ಯುಯಲ್ ಫಂಡ್ ಉದ್ಯಮದ ಸಾಧನೆಗೆ ಸಾಕ್ಷಿಗಳಾಗಿವೆ.

**AUMನಲ್ಲಿ ಗಣನೀಯ ಪ್ರಗತಿ:** AUMನಲ್ಲಿ50 ಲಕ್ಷ ಕೋಟಿ ರೂ. ಗಡಿಯನ್ನು ದಾಟಿರುವುದು ಮುಚ್ಯುಯಲ್ ಫಂಡ್ ಉದ್ಯಮದ ಇತಿಹಾಸದಲ್ಲಿಯೇ ಮೊದಲ ಬಾರಿ.ಇದು ಉದ್ಯಮದ ಸ್ಥಿರತೆಗೆ ಅತ್ಯುತ್ತಮ ಸಾಕ್ಷಿಯಾಗಿದೆ ಮತ್ತು ಸುದೀರ್ಘಾವಧಿ ಸಂಪತ್ತು ಕಟ್ಟುವ ಕೆಲಸದಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ. 2023ರ ಮಾರ್ಚ್ ತಿಂಗಳಿನ 39.42 ಲಕ್ಷ ಕೋಟಿಗೆ ಹೋಲಿಸಿದರೆ 2024ರ ಮಾರ್ಚ್‌ನಲ್ಲಿ 53.40 ಲಕ್ಷ ಕೋಟಿ ರೂ.AUM ದಾಖಲಾಗಿದೆ. ಅಂದರೆ ಸುಮಾರು 14 ಲಕ್ಷ ಕೋಟಿ ರೂ. ಏರಿಕೆಯಾಗಿರುವುದು ನಿಜಕ್ಕೂ ಅಭೂತಪೂರ್ವ ಸಾಧನೆ ಎನ್ನುವುದರಲ್ಲಿ ಅನುಮಾನವಿಲ್ಲ.

ಶೇ.35ಕ್ಕೂ ಅಧಿಕ ಪ್ರಗತಿ ದರ ದಾಖಲಾಗಿರುವುದು 2021ರ ಹಣಕಾಸು ವರ್ಷದ ನಂತರ ಅತ್ಯಧಿಕವಾಗಿದೆ. ಮಾರುಕಟ್ಟೆಯಲ್ಲಿನ ಇಂತಹ ಭರಪೂರ ನಿರ್ವಹಣೆಯ ಕಾರಣದಿಂದ ವೈಯಕ್ತಿಕ ಹೂಡಿಕೆದಾರರ ಸಹಭಾಗಿತ್ವಕ್ಕೆ ಹೆಚ್ಚಿನ ವೇಗ ಬಂದಿದೆ. ಹೂಡಿಕೆ ಕಾರ್ಯತಂತ್ರಗಳನ್ನು ರೂಪಿಸುವ ಕಡೆಗೆ ಆದ್ಯತೆಯೂ ಹೆಚ್ಚಾಗಿದೆ.

**ಹೂಡಿಕೆ ನೆಲೆಯ ವಿಸ್ತರಣೆ:** ಂಗಒನಲ್ಲಿನ ಏರಿಕೆಯ ಜೊತೆ ಜೊತೆಗೇ ಮುಚ್ಯುಯಲ್ ಫಂಡ್‌ನಲ್ಲಿ ಹೂಡಿಕೆ ಮಾಡುವವರ ಸಂಖ್ಯೆಯೂ ಗಣನೀಯ ಪ್ರಮಾಣದಲ್ಲಿ ಏರಿಕೆ ಉಂಟಾಗಿದೆ. ಹೂಡಿಕೆದಾರರ ಸಂಖ್ಯೆಯಲ್ಲಿ 4.46 ಕೋಟಿಯಷ್ಟು ಹೆಚ್ಚಾಗಿದೆ ಎನ್ನುತ್ತದೆ ಅಂಕಿ–ಅಂಶ. ಇದರಲ್ಲಿ ಮಹಿಳೆಯರ ಪ್ರಮಾಣ ಶೇ.23ರಷ್ಟಿದ್ದರೆ ಪುರುಷರ ಪ್ರಮಾಣ ಶೇ.77ರಷ್ಟಿದೆ. ಅಂದರೆ ಮುಚ್ಯುಯಲ್ ಫಂಡ್ ಕ್ಷೇತ್ರದಲ್ಲಿ ಎಲ್ಲರೂ ಒಳಗೊಳ್ಳುತ್ತಿದ್ದಾರೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಈ 4.46 ಕೋಟಿ ಹೂಡಿಕೆದಾರರಲ್ಲಿ ಶೇ.16ರಷ್ಟು (ಅಂ–ದರೆ 70 ಲಕ್ಷ ಹೂಡಿಕೆದಾರರು) ಮಂದಿ ಕಳೆದ ಒಂದು ಸೇರ್ಪಡೆಯಾಗಿದ್ದರೆ ಕಳೆದ ಐದು ವರ್ಷಗಳ ಅವಧಿಯಲ್ಲಿ ಶೇ.47ರಷ್ಟು (2.10 ಕೋಟಿ) ಹೂಡಿಕೆದಾರರು ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಅಂದರೆ ಭಾರತದಲ್ಲಿ ಮುಚ್ಯುಯಲ್ ಫಂಡ್ ಬಗ್ಗೆ ಜನರಲ್ಲಿ ಅರಿವು ದಿನದಿಂದ ದಿನಕ್ಕೆ ಹೆಚ್ಚುತ್ತ ಸಾಗಿದೆ.

**ಈಕ್ವಿಟಿ ಆಧಾರಿತ ವರ್ಗಗಳ ನಿರ್ವಹಣೆ:**ಎಲ್ಲಕ್ಕಿಂತ ಮುಖ್ಯವಾಗಿ ಈಕ್ವಿಟಿ ಆಧಾರಿತ ಮ್ಯುಚ್ಯುಯಲ್ ಫಂಡ್ ವರ್ಗಗಳಲ್ಲಿ ಗಣನೀಯ ಬೆಳವಣಿಗೆ ಕಂಡಿದೆ. ಅಂದರೆ 2024ರ ಹಣಕಾಸು ವರ್ಷದಲ್ಲಿ ಶೇ.55ರಷ್ಟು ಪ್ರಗತಿ ಸಾಧಿಸಲಾಗಿದೆ. ಈ ಅವಧಿಯಲ್ಲಿ ಒಟ್ಟು ಆಸ್ತಿ 23.50 ಲಕ್ಷ ಕೋಟಿ ರೂ.ಗುರಿ ತಲುಪಿದೆ.ಇದಕ್ಕೆ ಮುಖ್ಯ ಕಾರಣ ಹೂಡಿಕೆಯ ಒಳಹರಿವಿನಲ್ಲಿ ಆಗಿರುವ ಹೆಚ್ಚಳ. ಅದರಲ್ಲಿಯೂ ಬಹು ಬಂಡವಾಳ ಫಂಡ್‌ಗಳ ಏರಿಕೆಯ ಪ್ರಮಾಣ ಶೇ.85ರಷ್ಟಿದ್ದರೆ ಸಣ್ಣ ಬಂಡವಾಳದ ಪ್ರಮಾಣ ಶೇ.82ರಷ್ಟಿದೆ.

ಈಕ್ವಿಟಿ ಆಧಾರಿತ ಮ್ಯುಚ್ಯುಯಲ್ ಫಂಡ್ ವರ್ಗದಲ್ಲಿ 2024ರ ಹಣಕಾಸು ವರ್ಷದಲ್ಲಿ ಒಟ್ಟು 1.84ಲಕ್ಷ ಕೋಟಿ ರೂ. ಬಂಡವಾಳ ಹರಿದು ಬಂದಿರುವುದು ವಿಶೇಷ. ಇದು ಕಳೆದ ಹಣಕಾಸು ವರ್ಷದಲ್ಲಿ 1.47 ಲಕ್ಷ ಕೋಟಿ ರೂ. ಗಳಷ್ಟು ಒಳಹರಿವು ಉಂಟಾಗಿತ್ತು.

**ಹೈಬ್ರೀಡ್ ಫಂಡ್‌ಗಳಲ್ಲಿ ಗಮನಾರ್ಹ ಪ್ರಗತಿ:** 2024ರ ಹಣಕಾಸು ವರ್ಷದಲ್ಲಿ ಹೈಬ್ರೀಡ್ ಫಂಡ್‌ಗಳು ಏಳು ಲಕ್ಷ ಕೋಟಿ ರೂ. ಗಡಿಯನ್ನು ಕೂಡ ಮೀರಿ ಮುನ್ನಡೆದಿದೆ. ಅಂದರೆ ಹಿಂದಿನ ಹಣಕಾಸು ವರ್ಷದ ಮಾರ್ಚ್ ವರೆಗಿನ ಅವಧಿಗೆ ಹೋಲಿಸಿದರೆ ಶೇ.50ಕ್ಕೂ ಅಧಿಕ ಆಸ್ತಿ ಗಳಿಕೆಯಾಗಿದೆ.ಹೂಡಿಕೆದಾರರು ಅನುಸರಿಸಿದ ಆಸ್ತಿ ಹಂಚಿಕೆ ಕಾರ್ಯತಂತ್ರ ಮತ್ತು ಮಾರುಕಟ್ಟೆ ಮಧ್ಯಸ್ಥಿಕೆಯ ಅವಕಾಶಗಳಲ್ಲಿ ಹೂಡಿಕೆ ಮಾಡಿದ್ದರ ಫಲವಾಗಿ ಈ ಏರಿಕೆ ಉಂಟಾಗಿದೆ. ಈ ಹಣಕಾಸು ವರ್ಷದಲ್ಲಿ ಪ್ರಸ್ತುತ ವಿಭಾಗದಲ್ಲಿ 90000 ಕೋಟಿ ರೂ.ಗೂ ಅಧಿಕ ಮಧ್ಯಸ್ಥಿಕೆ ನಿಧಿಗಳ ಹರಿವನ್ನು ಕಾಣಬಹುದಾಗಿದೆ.

AUMನಲ್ಲಿನ ಪ್ರಗತಿಗೆ ಸಂಬಂಧಿಸಿದಂತೆ, ಹೈಬ್ರೀಡ್ ಫಂಡ್‌ಗಳ ವ್ಯಾಪ್ತಿಯಲ್ಲಿಯೇ ಬಹು ಆಸ್ತಿ ಹಂಚಿಕೆ ನಿಧಿಗಳಿಗೆ ಹೆಚ್ಚಿನ ಆದ್ಯತೆ ದೊರಕಿದೆ.ಇದರಿಂದಾಗಿ ಹೈಬ್ರೀಡ್ ಫಂಡ್‌ಗಳ ಪ್ರಗತಿಯ ಪ್ರಮಾಣ ಶೇ.153ರಷ್ಟು ದೊಡ್ಡ ಪ್ರಮಾಣದಲ್ಲಿ ಕಾಣಬಹುದಾಗಿದೆ. ನಂತರದ ಸ್ಥಾನ ಮಧ್ಯಸ್ಥಿಕೆ ಫಂಡ್‌ಗಳಿಗೆ (ಶೇ.127) ಸಂದಾಯವಾಗುತ್ತದೆ.

**ಡೆಟ್ ಮ್ಯುಚ್ಯುಯಲ್ ಫಂಡ್‌ಗಳಲ್ಲಿ ಸ್ಥಿರತೆ:** ಈ ಹಣಕಾಸು ವರ್ಷದಲ್ಲಿ ಡೆಟ್ ಫಂಡ್‌ಗಳು ಸಾಧಾರಣ ಎನ್ನುವಷ್ಟು ಏರಿಕೆ ಕಂಡಿವೆ. ಅಂದರೆ ಒಟ್ಟು 12.62 ಲಕ್ಷ ಕೋಟಿ ರೂ. ಆಸ್ತಿಯಲ್ಲಿ ಸರಿಸುಮಾರು ಶೇ.7ರಷ್ಟು ಮಾತ್ರ ಪ್ರಗತಿ ಉಂಟಾಗಿದೆ. ಹಿಂದಿನ ಎರಡು ಹಣಕಾಸು ವರ್ಷಗಳಲ್ಲಿ ಉಂಟಾಗಿರುವ ಹಿಂಜರಿತ ಇದಕ್ಕೆ ಕಾರಣ.

ಡೆಟ್ ಮ್ಯುಚ್ಯುಯಲ್ ಫಂಡ್ ವಿಭಾಗಗಳಲ್ಲಿ ಅಧಿಕ ಪ್ರಾಶಸ್ತ್ಯ ಸಿಕ್ಕಿರುವುದು ಮನಿ ಮಾರ್ಕೆಟ್ ಮತ್ತು ಲಿಕ್ವಿಡ್ ಫಂಡ್‌ಗಳಿಗೆ. ಅಂದರೆ ಇವೆರಡೂ ವಿಭಾಗಗಳಿಗೆ ಕ್ರಮವಾಗಿ ತಲಾ 40000 ಕೋಟಿ ರೂ. ಮತ್ತು 31000 ಕೋಟಿ ಗಳಿಕೆ ಉಂಟಾಗಿದೆ. ಈ ಹಣಕಾಸು ವರ್ಷದಲ್ಲಿ ಮನಿ ಮಾರ್ಕೆಟ್ ಫಂಡ್‌ಗಳು 2ನೇ ಅತ್ಯಧಿಕ ಶೇಕಡಾವಾರು (37%)ಏರಿಕೆ ಕಂಡಿವೆ.

**ಎಸ್‌ಐಪಿ ಪಾಲು ಏರಿಕೆ:** ಹೂಡಿಕೆದಾರರು ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಮೂಲಕ ಮ್ಯುಚ್ಯುಯಲ್ ಫಂಡ್‌ಗಳಿಗೆ ಹಣದ ಹೊಳೆ ಹರಿಸುವುದನ್ನು ಮುಂದುವರಿಸಿದ್ದಾರೆ. 2023ರ ಏಪ್ರಿಲ್‌ನಲ್ಲಿದ್ದ ಒಳಹರಿವು 13,700 ಕೋಟಿ ರೂ.ಆದರೆ ಈ ಬಾರಿ 2024ರ ಮಾರ್ಚ್ ಅವಧಿಗೆ ಅದು 19,300 ಕೋಟಿ ರೂ.ಗಡಿಯನ್ನು ತಲುಪಿರುವುದು ಗಮನಾರ್ಹ. ಒಟ್ಟಾರೆ ಈ ಜಿಗಿತ ಶೇ.40 ಎಂದು ಪರಿಗಣಿಸಲಾಗಿದೆ.

ಎಸ್‌ಐಪಿಗಳ ಮೂಲಕ ಎಲ್ಲ ಮ್ಯುಚ್ಯುಯಲ್ ಫಂಡ್ ಯೋಜನೆಗಳಿಗೆ ಉಂಟಾಗಿರುವ ಒಟ್ಟು ಒಳಹರಿವು ಸುಮಾರು ಎರಡು ಲಕ್ಷ ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಇದು ಹಿಂದಿನ ವರ್ಷ ದಾಖಲಾಗಿರುವ 1.55 ಲಕ್ಷ ಕೋಟಿ ರೂ.ಗಿಂತ ಶೇ.28ರಷ್ಟು ಅಧಿಕ. ಇದು ಹೂಡಿಕೆದಾರರಲ್ಲಿನ ಆತ್ಮವಿಶ್ವಾಸ ವೃದ್ಧಿಸಿರುವುದಕ್ಕೆ ಶಿಸ್ತುಬದ್ಧ ಹೂಡಿಕೆಗೆ ಸಾಕ್ಷಿಯಾಗಿದೆ.


2024ರ ಮಾರ್ಚ್ ಹೊತ್ತಿಗೆ ದಾಖಲಾಗಿರುವ ಎಸ್‌ಐಪಿ ಆಸ್ತಿಗಳು ಒಟ್ಟು 10.71 ಕೋಟಿ ರೂ. ಇದು ಒಟ್ಟು ಉದ್ಯಮದ ಆಸ್ತಿಗಿಂತ ಶೇ.20ರಷ್ಟು ಅಧಿಕ. ಇನ್ನೂ ಒಂದು ವಿಶೇಷವೆಂದರೆ ಪ್ರತಿ ತಿಂಗಳು ಅಂದಾಜು 17 ಲಕ್ಷ ಹೊಸ ಖಾತೆಗಳು ದಾಖಲಾಗುತ್ತಿದ್ದು ಒಟ್ಟು ಎಸ್‌ಐಪಿ ಖಾತೆಗಳ ಸಂಖ್ಯೆ 8.4 ಕೋಟಿ ದಾಟಿದೆ.

**ಬಾಟಮ್ ಲೈನ್:** ಭಾರತೀಯ ಮ್ಯುಚ್ಯುಯಲ್ ಫಂಡ್ ಕ್ಷೇತ್ರಕ್ಕೆ ಗಟ್ಟಿಮುಟ್ಟಾದ ಅಡಿಪಾಯವಿದೆ. ಪೂರಕವಾದ ಜನಸಂಖ್ಯಾಶಾಸ್ತ್ರ, ಹೆಚ್ಚುತ್ತಿರುವ ಹಣಕಾಸು ಸಾಕ್ಷರತೆ, ತಾಂತ್ರಿಕ ಪ್ರಗತಿ, ಬೆಳೆಯುತ್ತಿರುವ ಹೂಡಿಕೆದಾರರ ಆತ್ಮವಿಶ್ವಾಸ ಮತ್ತು ಫಂಡ್‌ನ ವೈವಿಧ್ಯಮಯ ಕೊಡುಗೆಗಳ ಫಲವಾಗಿ ಈ ಕ್ಷೇತ್ರ ಅಸಾಧಾರಣವಾದ ಪ್ರಗತಿಯತ್ತ ದಾಪುಗಾಲು ಹಾಕಿದೆ.



ಇತ್ತೀಚಿನ ಡಿಜಿಟಲ್ ಅಳವಡಿಕೆಯಿಂದಾಗಿ ಮ್ಯುಚ್ಯುಯಲ್ ಫಂಡ್‌ನಲ್ಲಿ ಹೂಡಿಕೆಯೂ ಸುಲಭವಾಗಿದೆ. ಈ ಕಾರಣದಿಂದ ಅದು ಸಣ್ಣ-ಪುಟ್ಟ ಪಟ್ಟಣ ಮತ್ತು ನಗರಗಳಿಂದಲೂ ಹೂಡಿಕೆದಾರರನ್ನು ಸೆಳೆಯುತ್ತಿದೆ. ಸುಧಾರಿತ ನಿಯಂತ್ರಕ ಕ್ರಮಗಳು ಮತ್ತು ಹೂಡಿಕೆದಾರರ ಶಿಕ್ಷಣ ಕಾರ್ಯಕ್ರಮಗಳು ಹೂಡಿಕೆದಾರರಲ್ಲಿ ಹೊಸ ಭರವಸೆ ಮೂಡುವಂತೆ ಮಾಡುವುದರಲ್ಲಿ ಅನುಮಾನವಿಲ್ಲ. ಭಾರತದ ಬೆಳೆಯುತ್ತಿರುವ ಈ ಸಹಸ್ರಮಾನದ ಯುವ ಜನಸಂಖ್ಯೆಯ ಆಸಕ್ತಿಯನ್ನು ಗಮನಿಸಿದರೆ ಭಾರತದ ಮ್ಯುಚ್ಯುಯಲ್ ಫಂಡ್ ಕ್ಷೇತ್ರಕ್ಕೆ ಅಪಾರವಾದ ಅವಕಾಶವಿರುವುದು ಸ್ಪಷ್ಟ. ಮುಂಬರುವ ದಿನಗಳಲ್ಲಿ ಚಲನಶೀಲ ಮತ್ತು ತಂತ್ರಜ್ಞಾನ ಪ್ರಣೀತವಾದ ಯುವ-ತಲೆಮಾರು ಈ ಉದ್ಯಮದ ಚಾಲಕಶಕ್ತಿಯಾಗಿ ಕೆಲಸ ಮಾಡಲಿದೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಮುಂದಿನ ಪಯಣವನ್ನು ಸುಲಭವಾಗಿ ಕ್ರಮಿಸಬೇಕಿದ್ದರೆ ಇಲ್ಲಿನ ಆರ್ಥಿಕ ಅಂಶಗಳು, ನಿಯಂತ್ರಣದಲ್ಲಿ ಆಗಿರುವ ಬದಲಾವಣೆಗಳು ಹಾಗೂ ಹೂಡಿಕೆದಾರರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವುದು ಕೂಡ ಅಷ್ಟೇ ಮುಖ್ಯ.

# ತುರ್ತು ವರ್ಷಾಶನ: ಬಿಟ್ಟುಬಿಡಿ ನಿವೃತ್ತಿ ಜೀವನದ ಚಿಂತೆ




**ಬದುಕಿನ** ಸುವರ್ಣ ಕಾಲಘಟ್ಟ ಎಂದರೆ ನಿವೃತ್ತಿ ನಂತರದ ಜೀವನ. ನಿಮ್ಮ ಜೀವನದ ಇಂತಹ ಅವಧಿಯನ್ನು ಖುಷಿಯಿಂದ, ಬಿಂದಾಸ್ ಆಗಿ ಕಳೆಯುವಂತಾಗಬೇಕು.ಸದಾ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಯೋಜನೆ ರೂಪಿಸಬೇಕು. ಅಥವಾ ಯಾವತ್ತೂ ಅಂತಹ ಕನಸನ್ನು ಸಾಕಾರಗೊಳಿಸುವ ಕಡೆಗೆ ತುಡಿಯುತ್ತಿರಬೇಕು. ಇಂತಹ ವಯಸ್ಸಿನಲ್ಲಿ ಯಾರೊಬ್ಬರೂ ಆದಾಯ ಮತ್ತು ಖರ್ಚುಗಳ ಬಗ್ಗೆ ಚಿಂತಿಸುವಂತಾಗಬಾರದು.

ನಿವೃತ್ತಿಯನ್ನು ನಿಮ್ಮ ಜೀವನದ ನಿರ್ಣಾಯಕ ಕಾಲಘಟ್ಟವೆಂದು ಯಾಕೆ ಪರಿಗಣಿಸಲಾಗುತ್ತದೆ ಎಂದರೆ ಆಗ ನಿಮಗೆ ಯಾವುದೇ ನಿಯಮಿತವಾದ ಆದಾಯ ಇರುವುದಿಲ್ಲ. ನಿವೃತ್ತಿಯ ನಂತರ ನಿಮ್ಮ ಜೀವನ ಶೈಲಿ ಮತ್ತು ವೈದ್ಯಕೀಯ ವೆಚ್ಚಗಳು ಕಡಿಮೆಯಾಗುತ್ತವೆಯೇ? ಖಂಡಿತವಾಗಿ ಇಲ್ಲ. ವೈದ್ಯಕೀಯ ವೆಚ್ಚಗಳು ಹೆಚ್ಚಾಗುತ್ತವೆಯೇ ಹೊರತು ಕಡಿಮೆಯಾಗುವುದಿಲ್ಲ.

ಒಂದು ವೇಳೆ ನೀವು ಸಮಗ್ರ ಮತ್ತು ಯೋಚನಾರ್ಹವಾದ ಹಣಕಾಸು ಯೋಜನೆಯನ್ನು ಮಾಡದೇ ಹೋದರೆ ನಿಮ್ಮ ಜೀವನದ ಸುವರ್ಣ ಕಾಲಘಟ್ಟ ಕೂಡ ಕಳೆಕುಂದುವ ಸಾಧ್ಯತೆ ಇರುತ್ತದೆ. ಹಾಗಾಗಿ ನಿವೃತ್ತಿ ಗುರಿಗಳು ಮತ್ತು ವೆಚ್ಚಗಳನ್ನು ಭರಿಸುವ ದೃಷ್ಟಿಯಿಂದ ಇಂತಹ ಹೊತ್ತಿನಲ್ಲಿ ನಿಯಮಿತ ಮತ್ತು ನಿಶ್ಚಿತವಾದ ಆದಾಯದ ಮೂಲ ಇರುವಂತೆ ವ್ಯವಸ್ಥೆ ಮಾಡಿಕೊಳ್ಳಬೇಕು. ಇಂತಹ ಹೊತ್ತಿನಲ್ಲಿ ನೆರವಿಗೆ ಬರುವುದು ನಿವೃತ್ತಿ ಆಧಾರಿತ ಜೀವ ವಿಮಾ ಯೋಜನೆಗಳು.ನಿಶ್ಚಿತವಾದ ಆದಾಯವನ್ನು ತರುವ ಅಂತಹ ಒಂದು ಹೂಡಿಕೆ ಆಯ್ಕೆ ಎಂದರೆ ತುರ್ತು ವರ್ಷಾಶನ ಯೋಜನೆ.

**ತುರ್ತು ವರ್ಷಾಶನ ಎಂದರೆ ಏನು?:** ಈ ಯೋಜನೆಯಲ್ಲಿ ನೀವು ಒಂದು ನಿರ್ದಿಷ್ಟ ಮೊಬಲಗನ್ನು ಹೂಡಿಕೆ ಮಾಡಿದ ತಕ್ಷಣವೇ ನಿಯಮಿತ ಆದಾಯದ ರೂಪದಲ್ಲಿ (ವರ್ಷಾಶನ) ಹಣ ಬರಲು ಆರಂಭವಾಗುತ್ತದೆ. ನೀವು ಯಾವ ಅವಧಿಯನ್ನು ಆಯ್ಕೆ ಮಾಡಿಕೊಂಡಿದ್ದೀರಿ ಅಥವಾ ಉಳಿದ ಇಡೀ ಜೀವಮಾನಕ್ಕೆ ಈ ಆದಾಯವು ನಿಶ್ಚಿತವಾಗಿ ಸಿಗುತ್ತಿರುತ್ತದೆ.ನೀವು ಮಾಸಿಕ, ತ್ರೈಮಾಸಿಕ, ಅರ್ಧ ವಾರ್ಷಿಕ ಅಥವಾ ವಾರ್ಷಿಕ ವರ್ಷಾಶನ ಪಾವತಿಯನ್ನು ಆಯ್ಕೆ ಮಾಡಿಕೊಳ್ಳಬಹುದು.

**ಲಭ್ಯವಿರುವ ಆಯ್ಕೆಗಳು: ಜೀವಮಾನದ ವರ್ಷಾಶನ ಯೋಜನೆ (ಆರ್‌ಓಪಿಪಿ):** ನೀವು ಜೀವಂತ ಇರುವ ತನಕ ನಿಯಮಿತವಾದ ಆದಾಯ ಬರುತ್ತಿರುತ್ತದೆ. ನಿಮ್ಮ ಮರಣದ ಬಳಿಕ ವರ್ಷಾಶನ ಅಂತ್ಯಗೊಳ್ಳುತ್ತದೆ ಮತ್ತು ಖರೀದಿ ಮಾಡಿದ ಮೊತ್ತವು ನಿಮ್ಮ ನಾಮಿನಿಗೆ ಮರಳಿ ದೊರೆಯುತ್ತದೆ.

**ಜೀವಮಾನದ ವರ್ಷಾಶನದ ಜಂಟಿ ಯೋಜನೆ (ಆರ್‌ಓಪಿಪಿ):** ನೀವು ಜೀವಂತ ಇರುವ ತನಕ ನಿಯಮಿತ ಆದಾಯ ಪಡೆಯುತ್ತಿರುವಿರಿ. ನಿಮ್ಮ ಅಥವಾ ನಿಮ್ಮ ಸಂಗಾತಿಯ ಮರಣದ ಬಳಿಕ ಯಾರು ಬದುಕುಳಿಯುವರೋ ಅವರಿಗೆ ವರ್ಷಾಶನ ಮುಂದುವರಿಯುತ್ತದೆ. ಅವರ ನಿಧನದ ನಂತರ ವರ್ಷಾಶನ ಅಂತ್ಯಗೊಳ್ಳುತ್ತದೆ ಮತ್ತು ಖರೀದಿ ಮೊತ್ತವು ನಾಮಿನಿಗೆ ವಾಪಾಸಾಗುತ್ತದೆ.

ತೆರಿಗೆ ಪರಿಣಾಮಗಳು ಹೀಗಿವೆ:

**ಎ) ಪಾವತಿ ಮಾಡಿರುವ ಪ್ರೀಮಿಯಂ ಮೇಲೆ:** ಸೆಕ್ಷನ್ 80ಸಿಸಿಸಿ ಅಡಿಯಲ್ಲಿ ಪಾವತಿ ಮಾಡಿರುವ ಪ್ರೀಮಿಯಂನ್ನು ಕಡಿತ ಮಾಡಲು ಅವಕಾಶವಿದೆ. ಇದು ಸೆಕ್ಷನ್ 80ಸಿ ಅಡಿಯಲ್ಲಿ ಮಾಡಲಾಗುವ 1.5ಲಕ್ಷ ರೂ.ಗರಿಷ್ಠ ಮಿತಿ ಕಡಿತವನ್ನು ಕೂಡ ಒಳಗೊಂಡಿದೆ.

**ಬಿ) ಸ್ವೀಕೃತ ವರ್ಷಾಶನದ ಮೇಲೆ:** ಪಾವತಿ ಮಾಡಲಾದ ವರ್ಷಾಶನವು ನಿಮ್ಮ ಕೈಸೇರಿದ ಆದಾಯ ಎಂಬ ಅರ್ಹತೆಯನ್ನು ಪಡೆಯುತ್ತದೆ. ಅವುಗಳನ್ನು ನಿಮ್ಮ ಒಟ್ಟು ಆದಾಯಕ್ಕೆ ಸೇರ್ಪಡೆ ಮಾಡಲಾಗುತ್ತದೆ ಮತ್ತು ಪ್ರಸ್ತುತ ಇರುವ ನಿಮ್ಮ ಆದಾಯ ತೆರಿಗೆ ಸ್ಲಾಬ್ ದರಗಳಿಗೆ ತಕ್ಕಂತೆ ತೆರಿಗೆ ವಿಧಿಸಲಾಗುತ್ತದೆ.

ಒಂದು ಉದಾಹರಣೆಯೊಂದಿಗೆ ಈ ವರ್ಷಾಶನವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನ ಮಾಡೋಣ: 60 ವರ್ಷ ವಯಸ್ಸಿನ ಉದ್ಯಮಿ ರಾಹುಲ್ ಖರೀದಿ ಬೆಲೆಯ ಮರುಪಾವತಿಯ ಅವಕಾಶವನ್ನು ಹೊಂದಿರುವ ತುರ್ತು ವರ್ಷಾಶನವನ್ನು ಖರೀದಿ ಮಾಡುತ್ತಾರೆ.ಅವರು ಒಟ್ಟು ಮೊಬಲಗು ಒಂದು ಕೋಟಿ ರೂ.ಪಾವತಿ ಮಾಡುತ್ತಾರೆ.ಇದರಿಂದ ಅವರಿಗೆ ಜೀವಂತ ಇರುವ ತನಕ ಪ್ರತಿ ತಿಂಗಳು 50 ಸಾವಿರ ರೂ.ನಿಶ್ಚಿತ ಮೊತ್ತ ಬರುತ್ತಿರುತ್ತದೆ.

ರಾಹುಲ್ ಅವರಿಗೆ ಮುಂದಿನ ತಿಂಗಳಿನಿಂದಲೇ 50000 ರೂ. ಆದಾಯ ಬರಲು ಆರಂಭವಾಗುತ್ತದೆ. ಅವರಿಗೆ ಅದನ್ನು ಹೊರತುಪಡಿಸಿ ಇನ್ನಿತರ ಯಾವುದೇ ಆದಾಯ ಮೂಲವಿಲ್ಲ. ಅವರ ಆದಾಯವು ತೆರಿಗೆ ಮಿತಿಗಿಂತ ಕಡಿಮೆ ಇದೆ. ಹಾಗಾಗಿ ಅವರು ತಮ್ಮ ತುರ್ತು ವರ್ಷಾಶನ ಆದಾಯದ ಮೇಲೆ ತೆರಿಗೆ ಪಾವತಿ ಮಾಡಬೇಕಾಗಿಲ್ಲ.

ಒಂದು ವೇಳೆ ದುರದೃಷ್ಟವಶಾತ್ ರಾಹುಲ್ 70ರ ವಯಸ್ಸಿನಲ್ಲಿ ಮರಣವನ್ನಪ್ಪಿದರೆ ಅವರ ನಾಮಿನಿಗೆ ಒಂದು ಕೋಟಿ ರೂ.ನಿಶ್ಚಿತ ಮೊತ್ತ ದೊರೆಯುತ್ತದೆ.ಈ ಮೊತ್ತವು ಆತನ ಗೈರುಹಾಜರಿಯಲ್ಲಿ ಕುಟುಂಬದ ಹಣಕಾಸು ಭವಿಷ್ಯವನ್ನು ಸುಭದ್ರವಾಗಿಡುವಲ್ಲಿ ನೆರವಾಗುತ್ತದೆ.

ಇದರಲ್ಲಿ ರಾಹುಲ್ ಒಟ್ಟು ಪಾವತಿ ಮಾಡಿದ್ದು ಒಂದು ಕೋಟಿ ರೂ. ಅದರಿಂದ ಅವರ ಹತ್ತು ವರ್ಷಗಳ ನಿವೃತ್ತಿ ಜೀವನದಲ್ಲಿ ಅವರು ಅನುಭವಿಸಿದ್ದು 60 ಲಕ್ಷ ರೂ.ಅಂತಿಮವಾಗಿ ಅವರ ನಿಧನದೊಂದಿಗೆ ಕುಟುಂಬಕ್ಕೆ ಮರಳಿ ಸಿಕ್ಕಿದ್ದು ಒಂದು ಕೋಟಿ ರೂ.

ಹಾಗಾದರೆ ತುರ್ತು ವರ್ಷಾಶನ ಯಾಕೆ ಬೇಕು? ನಿವೃತ್ತಿಯ ಬಳಿಕ ನಿಮ್ಮ ನಿಯಮಿತ ಆದಾಯ ಬಂದ್ ಆಗುತ್ತದೆ. ಆ ಬಳಿಕ ನೀವು ಹೂಡಿಕೆ ಮಾಡಲು ಸಾಧ್ಯವಾಗುವುದಿಲ್ಲ. ನೀವು ಹೂಡಿಕೆ ಮಾಡಿರುವುದನ್ನು ಅಥವಾ ಉಳಿತಾಯದ ಹಣವನ್ನು ನಿಮ್ಮ ಎಲ್ಲ ಅಗತ್ಯಗಳಿಗೆ ಬಳಸಿಕೊಳ್ಳಬೇಕು.

ಹಾಗಾಗಿ ತುರ್ತು ವರ್ಷಾಶನ ಯೋಜನೆ ಅತ್ಯಂತ ಪರಿಪೂರ್ಣವಾದ ಸೂತ್ರ. ಯಾಕೆಂದರೆ ನಿಮ್ಮ ದುಡಿಮೆಯ ವರ್ಷಗಳಲ್ಲಿ ಗಳಿಸಿದ್ದನ್ನು ಸಂಗ್ರಹಿಸಿದ ಸಂಪತ್ತಿನಿಂದ ನಿಶ್ಚಿತವಾದ ಆದಾಯವನ್ನು ಪ್ರತಿ ತಿಂಗಳೂ ಪಡೆಯಲು ಸಾಧ್ಯವಾಗುತ್ತದೆ.

ಈಗ ಇದರಲ್ಲಿರುವ ಅತ್ಯಂತ ಪ್ರಮುಖ ಅಂಶಗಳನ್ನು ಗಮನಿಸೋಣ:

**ಸರ್ವಸ್ವತಂತ್ರ:** ನಿಮಗೆ ನಿರ್ದಿಷ್ಟ ಆದಾಯ ಇಲ್ಲದೇ ಹೋದರೆ ನೀವು ಇನ್ನೊಬ್ಬರನ್ನು ಅವಲಂಬಿಸಿಕೊಂಡಿರಬೇಕಾಗುತ್ತದೆ. ಆದರೆ, ತುರ್ತು ವರ್ಷಾಶನದಿಂದ ನಿಯಮಿತವಾದ ಆದಾಯ ನಿಮಗೆ ಬರುತ್ತಿದ್ದರೆ ನಿಮ್ಮ ಇಚ್ಛೆಗೆ ಅನುಗುಣವಾಗಿ ಬದುಕನ್ನು ನಡೆಸುತ್ತಿರಬಹುದು.

ಹೆಚ್ಚುವ ಜೀವನದ ನಿರೀಕ್ಷೆ: ಆರವತ್ತನೇ ವಯಸ್ಸಿನಿಂದ ಸರಾಸರಿ ಆಯಸ್ಸು ಕೆಲವು ದಶಕಗಳ ಕಾಲ ಹೆಚ್ಚುತ್ತದೆ. ಇದರ ಜೊತೆ ಜೊತೆಗೆ ಉತ್ತಮ ಆರೋಗ್ಯ ಸೇವಾ ಸೌಲಭ್ಯಗಳು ಲಭ್ಯವಾಗುತ್ತವೆ ಮತ್ತು ಜೀವನ ಗುಣಮಟ್ಟ ಕೂಡ ಸುಧಾ–ರಿಸುತ್ತದೆ. ಹಾಗಾಗಿ ನೀವು ಜೀವಂತ ಇರುವ ತನಕ ನಿಮಗೆ ನಿಯಮಿತವಾದ ಆದಾಯದ ಮೂಲ ಇರಬೇಕಾಗುತ್ತದೆ.

**ವೈದ್ಯಕೀಯ ವಿಚಾರಗಳು:** ವಯಸ್ಸಾಗುತ್ತ ಹೋದಂತೆ ಆರೋಗ್ಯ ಸಮಸ್ಯೆಗಳೂ ಹೆಚ್ಚುತ್ತವೆ. ಅದಕ್ಕೆ ತಕ್ಕಂತೆ ಆರೋಗ್ಯ ಸೇವಾ ವೆಚ್ಚಗಳೂ ಹೆಚ್ಚುತ್ತವೆ. ಇಂತಹ ವೇಳೆ ನಿಯಮಿತ ಆದಾಯದಿಂದ ಇವುಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಬಹುದು.

**ಮಾರುಕಟ್ಟೆಯ ಅಸ್ಥಿರತೆ:** ಷೇರು ಮಾರುಕಟ್ಟೆಯ ಏರಿಳಿತ ಅಥವಾ ಹೂಡಿಕೆಯ ಅಪಾಯಗಳು ವರ್ಷಾಶನ ಯೋಜನೆಯ ಮೇಲೆ ಯಾವುದೇ ರೀತಿಯಲ್ಲಿ ಪರಿಣಾಮ ಬೀರುವುದಿಲ್ಲ. ಮ್ಯುಚ್ಯುಯಲ್ ಫಂಡ್‌ಗಳು, ಈಕ್ವಿಟಿ, ಬಾಂಡ್‌ಗಳು ಮಾರುಕಟ್ಟೆಯ ಏರಿಳಿತ, ಹಣದುಬ್ಬರದಂತಹ ಸಮಸ್ಯೆಗಳಿಂದ ಏರಿಳಿತ ಹೊಂದಬಹುದು. ಆದರೆ ವರ್ಷಾಶನ ಯೋಜನೆ ಅದೆಲ್ಲವುಗಳಿಂದ ಮುಕ್ತವಾಗಿವೆ.

**ಪ್ರೀತಿ ಪಾತ್ರರಿಗೆ ನಿಮ್ಮ ಆಸ್ತಿ:** ಈ ಯೋಜನೆಯು ನಿಮ್ಮ ಆಸ್ತಿಯನ್ನು ಪ್ರೀತಿಪಾತ್ರರಿಗೆ ವರ್ಗಾಯಿಸುವಲ್ಲಿ ನೆರವಾಗುತ್ತದೆ. ಖರೀದಿ ಮಾಡಿದ ಮೌಲ್ಯವನ್ನೇ ಮರುಪಾವತಿ ಮಾಡುವುದರಿಂದ (ಮರಣಾನಂತರ)ನಿಮ್ಮ ನಾಮಿನಿಗೆ ಪ್ರೀಮಿಯಂ ಮೊತ್ತ ದಕ್ಕಿದಂತಾಗುತ್ತದೆ. ನಿಮ್ಮ ಜೀವನಾನಂತರ ಕುಟುಂಬದ ಭವಿಷ್ಯವನ್ನು ಭದ್ರಪಡಿಸುವ ಈ ಅಂಶ ಅತ್ಯಂತ ಆಕರ್ಷಕವಾದುದು.

**ಸರಳ ಯೋಜನೆ:** ತುರ್ತು ವರ್ಷಾಶನ ಅತ್ಯಂತ ಸರಳವಾದ ಯೋಜನೆ. ನಮಗೆ ನಿರ್ಧಾರ ಕೈಗೊಳ್ಳಲಾಗದ ಸಂಕೀರ್ಣತೆ ಇದರಲ್ಲಿ ಇಲ್ಲ. ಒಮ್ಮೆ ಇದನ್ನು ನಾವು ಖರೀದಿ ಮಾಡಿದರೆ ನಿರ್ಧಾರವನ್ನು ಮರುಪರಿಶೀಲಿಸುವ ಅಥವಾ ಅದರ ನಿರ್ವಹಣೆಯ ಮೇಲ್ವಿಚಾರಣೆ ನಡೆಸುವ ಅಗತ್ಯವೇನೂ ಇರುವುದಿಲ್ಲ.

ಆದಾಯದ ಗ್ಯಾರಂಟಿ: ನಾವು ಬದುಕಿರುವ ವರೆಗೂ ವರ್ಷಾಶನದಿಂದ ನಿಶ್ಚಿತವಾದ ಆದಾಯ ಬರುತ್ತಿರುತ್ತದೆ.

**ಹಣದ ಭದ್ರತೆ:** ನಿಮ್ಮ ನಿವೃತ್ತಿ ವರ್ಷಗಳಲ್ಲಿ ಸುಸ್ಥಿರವಾದ, ನಿಯಮಿತ ಆದಾಯದ ಅಗತ್ಯವಿರುತ್ತದೆ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ನೀವು ಹೂಡಿಕೆ ಮಾಡಿದ ಮೊತ್ತದ ಸುರಕ್ಷತೆಯ ಬಗ್ಗೆ ಖಾತರಿ ಇರಬೇಕಾಗುತ್ತದೆ. ನೀವು ಜೀವನವಿಡೀ ಕಷ್ಟಪಟ್ಟು ದುಡಿದು ಗಳಿಸಿದ ಹಣದ ವಿಚಾರದಲ್ಲಿ ರಿಸ್ಕ್ ತೆಗೆದುಕೊಳ್ಳುವ ಅವಧಿ ನಿವೃತ್ತಿ ಜೀವನದಲ್ಲ. ತುರ್ತು ವರ್ಷಾಶನದೊಂದಿಗೆ ನಿಮ್ಮ ಹಣ ಸುರಕ್ಷಿತ ಮತ್ತು ಸುಭದ್ರ.

**ಬಾಟಮ್ ಲೈನ್:** ಎಲ್ಲರ ಬದುಕಿನಲ್ಲಿ ನಿವೃತ್ತಿ ಅವಧಿ ಅತ್ಯಂತ ನಿರ್ಣಾಯಕ. ಅಂತಹ ಘಳಿಗೆಯಲ್ಲಿ ಸೂಕ್ತವಾದ ಯೋಜನೆ ರೂಪಿಸುವುದರಿಂದ ಬಾಕಿ ಉಳಿದಿರುವ ವರ್ಷಗಳಲ್ಲಿ ಆರಾಮದಾಯಕ ಜೀವನ ನಡೆಸಲು ಸಾಧ್ಯವಾಗುತ್ತದೆ. ಅದಕ್ಕೆ ಸೂಕ್ತವಾದ ಮಾರ್ಗವೆಂದರೆ ತುರ್ತು ವರ್ಷಾಶನ. ಇದರಿಂದ ನಿಮ್ಮ ಪ್ರೀತಿಪಾತ್ರರೊಂದಿಗೆ ಎರಡನೇ ಇನ್ನಿಂಗ್ಸ್‌ನ್ನು ಖುಷಿ ಖುಷಿಯಾಗಿ ಕಳೆಯಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ವೃದ್ಧಾಪ್ಯದ ದಿನಗಳಲ್ಲಿ ಇತರರ ಮೇಲೆ ಅವಲಂಬಿಸದೇ ಇರಲು ಇಂದೇ ತಕ್ಕ ನಿರ್ಧಾರವನ್ನು ಕೈಗೊಳ್ಳಬೇಕಾದದ್ದು ಅನಿವಾರ್ಯ. ಹಾಗಾಗಿ ನೀವು ನಿವೃತ್ತಿಗೆ ಹತ್ತಿರವಿದ್ದರೆ ಮತ್ತು ನಿಮ್ಮ ಬಳಿ ನಿವೃತ್ತಿಯ ಹೆಚ್ಚುವರಿ ಫಂಡ್ ಲಭ್ಯವಿದ್ದರೆ ಅದನ್ನು ತಕ್ಷಣ ತುರ್ತು ವರ್ಷಾಶನ ಯೋಜನೆಯಲ್ಲಿ ಹೂಡಿಕೆ ಮಾಡಿ. ಅದರಿಂದ ನಿವೃತ್ತಿ ನಂತರದ ನಿಮ್ಮ ಜೀವನವನ್ನು ಯಾವುದೇ ಚಿಂತೆ ಇಲ್ಲದೆ ಕಳೆಯಬಹುದು.


INSPIRE INDIA
WEALTH PVT LTD
ಹೂಡಿಕೆ ವೇಳೆ -ನೆನಪಿರಲಿ ಇನ್‌ಸ್ಪೈರ್ ಇಂಡಿಯಾ ಎಎಂಎಫ್ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು




ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆ ಮಾಡುವ ಸಮರ್ಪಕತೆ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆ ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈ.ಲಿ.
#65, ಸುರಾಸ ಎನ್‌ಕ್ಲೇವ್, ಮೊದಲ ಮಹಡಿ
ಪುಟ್ಟಣ್ಣ ರಸ್ತೆ, ಗಾಂಧಿ ಬಜಾರ್,
ಬಸವನಗುಡಿ, ಬೆಂಗಳೂರು -560004
9035414414, 080-42129917
info@inspireindiafs.com


ಈ ಜಗತ್ತು ನಾವು ನಮ್ಮ ಬಗ್ಗೆ ಹೇಳುವ ಸತ್ಯಕ್ಕಿಂತ ಇತರರು ಹೇಳುವ ಸುಳ್ಳನ್ನೇ ಹೆಚ್ಚಾಗಿ ನಂಬುತ್ತದೆ: -ಡಾ.ಅಬ್ದುಲ್ ಕಲಾಂ